**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ ಸಿ ನಂಃ384/2018</u>**

ಸಾಕ್ಷಿಯ ಹೆಸರು: ಮೂರ್ತಿ ಸಿ.ಡಬ್ಲ್ಯುಃ 20
ತಂದೆಯ ಹೆಸರು: ಬಂಗಾರಪ್ಪ ಪಿ.ಡಬ್ಲ್ಯುಃ 06
ವಯಸ್ಸು : 63 ವರ್ಷ
ಉದ್ಯೋಗ : ನಿವೃತ್ತ ಪಿ ಎಸ್ ಐ
ವಾಸ ಸ್ಥಳ : ಶಿವಮೊಗ್ಗ

**ದಿನಾಂಕಃ 13/03/2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 16/7/2017 ರಿಂದ 17/03/2018 ರವರೆಗೂ ತರೀಕೆರೆಯಲ್ಲಿ ಪಿ ಎಸ್ ಐ ಕೆಲಸ ಮಾಡಿದ್ದೇನೆ.

ದಿಃ05/01/2017 ರಂದು ಬೆಃ 9-30 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಚಿರತೆ ಚರ್ಮ, ಮೋಟಾರ್ ಬೈಕು, ಮೊಬೈಲ್, ಕತ್ತಿ, ಕೆಂಪು ಬಣ್ಣದ ಬ್ಯಾಗು, ಮುಂತಾದ ವಸ್ತುಗಳನ್ನು 1 ನೇ ಆರೋಪಿಯನ್ನು ಹಾಜರು ಮಾಡಿದ್ದರ ಮೇರೆಗೆ ಮತ್ತು ಅದರ ಜೊತೆ ನೀಡಲಾದ ಒಂದು ವರದಿ ಆಧಾರದ ಮೇರೆಗೆ ಠಾಣಾ ಅಪರಾದ ಕ್ರಮ ಸಂಃ 6/207 ರಂತೆ ಪ್ರಕರಣ ದಾಖಲು ಮಾಡಿದ್ದೇನೆ. ಪ್ರ ವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸ್ವತ್ತುಗಳನ್ನು ಪಿ ಎಫ್ ಗೆ ಅಳವಡಿಸಿದ್ದೇನೆ. ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿದ್ದೇನೆ. ಆರೋಪಿಯನ್ನು ಸರ್ವೋಚ್ಚ ನ್ಯಾಯಾಯದ ದಸ್ತಗಿರಿ ನಿಯಮಗಳನ್ನು ಪಾಲನೆ ಮಾಡಿ ದಸ್ತಗಿಹಿರಿ ಮಾಡಿದ್ದೇನೆ. ಸಿಬ್ಬಂದಿ ಮೂಲಕ ನ್ಯಾಯಾಲಯದ ಮುಂದೆ ಆರೋಪಿಯನ್ನು ಮಾಡಿದ್ದೇನೆ. ದಿಃ05/1/2017 ರಂದು ರಂಗಯ್ಯ, ಪೂರ್ಣೇಶ, ಕೃಷ್ಣರಾಜು, ಕುಮಾರ ಹಾಗೂ ಇತರರ ಹೇಳಿಕೆ ಪಡೆದಿದ್ದೇನೆ. ದಿಃ02/2/2017 ರಂದು ಆರೋಪಿ 2 ಸುರೇಶ ರವರು ಠಾಣೆಗೆ ಹಾಜರಾಗಿರುತ್ತಾರೆ ಮತ್ತು ಅವರ ಜೊತೆ ನಿರೀಕ್ಷಣಾ ಜಾಮೀನು ತಂದಿರುತ್ತಾರೆ. ಆ ಪ್ರಕಾರ ಅವರನ್ನು ಬಂಧಿಸಿ ಬಿಡುಗಡೆ ಮಾಡಿದ್ದೇನೆ. ಸದರಿ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿದ್ದೇನೆ. ರವಿರವರನ್ನೂ ಸಹ ಬಂಧಿಸಿ ಬಿಡುಗಡೆ ಮಾಡಿದ್ದೇನೆ. ಸದರಿ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿದ್ದೇನೆ. ಆ ನಂತರ ಆರೋಪಿ 4, 5 ರವರನ್ನೂ ಸಹ ಕಡೂರಿನಲ್ಲಿ ಸಿಬ್ಬಂದಿ ವಶಕ್ಕೆ ಪಡೆದು ನನ್ನ ಮುಂದೆ ಹಾಜರು ಮಾಡಿದ್ದಾರೆ. ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ನಂತರ ಅವರನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ. ಆರೋಪಿ ನಿಂಗಾನಾಯ್ಕ ನವರನ್ನು ನ್ಯಾಯಾಲಯದ ಆದೇಶದಂತೆ ಪೋಲೀಸ್ ವಶಕ್ಕೆ ಪಡೆದಿದ್ದೇನೆ.

ಸದರಿ ಆರೋಪಿ ತೋರಿಸಿದ ಹಾಗೆ ಆರೋಪಿ ನಾಗೇನಹಳ್ಳಿಯಲ್ಲಿ ಅವರ ಗುಡಿಸಲಿನಲ್ಲಿಟ್ಟಿದ್ದ ಕೋವಿಯನ್ನು ಪಂಚರ ಸಮಕ್ಷಮ ಸ್ವಾದೀನಪಡಿಕೊಂಡಿರುತ್ತೇನೆ. ಕೋವಿಯನ್ನು ಪಿ ಎಫ್ ಗೆ ಅಳವಡಿಸಿದ್ದೇನೆ.

ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಆರೋಪಿ ಎಂ ಸಿ ಹಳ್ಳಿಯ ಪಾರೆಸ್ಟ್ ಬಳಿ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಆರೋಪಿ ತೋರಿಸಿದ ಕೊಟ್ಟ ಹಾಗೆ ಸದರಿ ಸ್ಥಳದಲ್ಲಿ ಮಹಜರ್ ಮಾಡಿದ್ದೇನೆ. ಆರೋಪಿತರು ಆ ಸ್ಥಳದಲ್ಲಿ ಚಿರತೆಯನ್ನ ಕೊಂದು ಚರ್ಮ ತೆಗೆದಿರುತ್ತಾರೆ. ನಂತರ ಚಿರತೆ ಚರ್ಮವನ್ನು ಎಫ್ ಎಸ್ ಎಲ್ ವರದಿ ಪಡೆದುಕೊಳ್ಳಲು ಸಂಬಂದಪಟ್ಟ ಇಲಾಖಗೆ ಕಳುಹಿಸಿದ್ದೇನೆ. ಒಂಟಿ ನಳಿಕೆ ಬಂದೂಕನ್ನೂ ಸಹ ಎಫ್ ಎಸ್ ಎಲ್ ವರದಿ ಪಡೆದುಕೊಳ್ಳಲು ಸಂಬಂದಪಟ್ಟ ಇಲಾಖೆಗೆ ಕಳುಹಿಸಿದ್ದೇನೆ. ದಿಃ05/4/2017 ರಂದು ಪೂರ್ಣೇಶ, ಕೃಷ್ಣರಾಜು, ಕುಮಾರ ಮುಂತಾದವರ ಮುಂದುವರೆದ ಹೇಳಿಕೆ ಪಡೆದಿದ್ದೇನೆ. ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಪೋಲೀಸ್ ನಿರೀಕ್ಷಕರಾದ ಜಯಂತ್ ಗೌಳಿ ಯವರಿಗೆ ವರ್ಗಾಯಿಸಿದ್ದೇನೆ.

ಚಾಸಾ-1 ರವರು ನೀಡಿದ ದೂರು ನಿಪಿ 4 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ-4(ಬಿ) ಎಂದು, ಪ್ರ ವ ವನ್ನು ನೋಡುತ್ತಿದ್ದೇನೆ. ಅದನ್ನು ನಿಪಿ-9 ಎಂದು, ಸಹಿ ನಿಪಿ-9(ಎ) ಎಂದು ಗುರುತಿಸಲಾಯ್ತು. ನಿಪಿ-1 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ2 ಮತ್ತು 3 ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತೇನೆ. ಆರೋಪಿ ಸ್ಥಳ ತೋರಿಸಿದಂತೆ ಎಂ ಸಿ ಹಳ್ಳಿಯಲ್ಲಿ ಬರೆದ ಮಹಜರ್ ನಿಪಿ-7 ಆಗಿರುತ್ತದೆ. ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯ್ತು. ನಿಪಿ8 ಭಾವಚಿತ್ರದಲ್ಲಿ ನಾನು ಕಂಡು ಬರುತ್ತೇನೆ. ಚಿರತೆ ಚರ್ಮದ ಬಗ್ಗೆ ಎಫ್ ಎಸ್ ಎಲ್ ರವರಿಗೆ ಬರೆದ ಪತ್ರವನ್ನು ನಿಪಿ-10 ಎಂದು, ಸಹಿ ನಿಪಿ-10(ಎ) ಎಂದು ಗುರುತಿಸಲಾಯ್ತು. ಬಂದೂಕಿನ ಬಗ್ಗೆ ಎಫ್ ಎಸ್ ಎಲ್ ರವರಿಗೆ ಬರೆದ ಪತ್ರವನ್ನು ನಿಪಿ-11 ಎಂದು, ಸಹಿ ನಿಪಿ-11(ಎ) ಎಂದು ಗುರುತಿಸಲಾಯ್ತು. ನಾಡಬಂದೂಕನ್ನು ನೋಡುತ್ತಿದ್ದೇನೆ. ಅದನ್ನು ಮು ಮಾ2 ಎಂದು ಗುರುತಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಚಿರತೆ ಕೊಂದು ಚರ್ಮ ಮಾರಾಟ ಮಾಡಲು ಪ್ರಯತ್ನ ಮಾಡಿದ ಆರೋಪಿತರಾಗಿದ್ದಾರೆ, ಅವರನ್ನೇ ನಾನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದೇನೆ. ಚಿರತೆ ಚರ್ಮ ಈಗಾಗಲೇ ಮು ಮಾ1 ಆಗಿರುತ್ತದೆ. ನಿಪಿ 6 ರಲ್ಲಿ ಕತ್ತಿ, ಮೊಬೈಲ್ ಕಂಡು ಬರುತ್ತದೆ. ಅದರ ಜೊತೆ ಚಿರತೆ ಚರ್ಮ ಸಹ ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಬಿ ಟಿ ಜಿ ವಕೀಲರಿಂದಃ</u>**

ಚಾಸಾ-1 ರವರು ನಾನು ಹೇಳಿದಂತೆ ಯಾವುದೇ ವಸ್ತು, 1 ನೇ ಆರೋಪಿಯನ್ನು ನನ್ನ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾದ ಎಸಗದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾಡಬಂದೂಕನ್ನು ಪಂಚರ

ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ಥಳವನ್ನು ನಮಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಅವುಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೇಪಿತರಿಗೂ ಮುದ್ದೆಮಾಲುಗಳಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 6 ನೇ ಆರೋಪಿತರ ಪರ ಕೆ ಪಿ ವಕೀಲರಿಂದಃ**

ಆರೋಪಿ 6 ರವರ ಮೇಲೂ ಯಾವುದೇ ಅಪರಾದ ಕಂಡು ಬಂದರೇ ಇದ್ದರೂ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-

**(ಎಂ.ಸಿ. ನಂಜೇಗೌಡ)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ ಸಿ ನಂಃ143/2020</u>**

ಸಾಕ್ಷಿಯ ಹೆಸರು: ಮೂರ್ತಿ    ಸಿ.ಡಬ್ಲ್ಯುಃ 20
ತಂದೆಯ ಹೆಸರು: ಬಂಗಾರಪ್ಪ    ಪಿ.ಡಬ್ಲ್ಯುಃ 03
ವಯಸ್ಸು : 63 ವರ್ಷ
ಉದ್ಯೋಗ : ನಿವೃತ್ತ ಪಿ ಎಸ್ ಐ
ವಾಸ ಸ್ಥಳ : ಶಿವಮೊಗ್ಗ

**ದಿನಾಂಕಃ 13/03/2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 16/7/2017 ರಿಂದ 17/03/2018 ರವರೆಗೂ ತರೀಕೆರೆಯಲ್ಲಿ ಪಿ ಎಸ್ ಐ ಕೆಲಸ ಮಾಡಿದ್ದೇನೆ.

ದಿಃ05/01/2017 ರಂದು ಬೆಃ 9-30 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಚಿರತೆ ಚರ್ಮ, ಮೋಟಾರ್ ಬೈಕು, ಮೊಬೈಲ್, ಕತ್ತಿ, ಕೆಂಪು ಬಣ್ಣದ ಬ್ಯಾಗು, ಮುಂತಾದ ವಸ್ತುಗಳನ್ನು 1 ನೇ ಆರೋಪಿಯನ್ನು ಹಾಜರು ಮಾಡಿದ್ದರ ಮೇರೆಗೆ ಮತ್ತು ಅದರ ಜೊತೆ ನೀಡಲಾದ ಒಂದು ವರದಿ ಆಧಾರದ ಮೇರೆಗೆ ಠಾಣಾ ಅಪರಾದ ಕ್ರಮ ಸಂಃ 6/2017 ರಂತೆ ಪ್ರಕರಣ ದಾಖಲು ಮಾಡಿದ್ದೇನೆ. ಪ್ರ ವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸ್ವತ್ತುಗಳನ್ನು ಪಿ ಎಫ್ ಗೆ ಅಳವಡಿಸಿದ್ದೇನೆ. ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಚಾ ಹೇಳಿಕೆ ಪಡೆದಿದ್ದೇನೆ. ಆರೋಪಿಯನ್ನು ಸರ್ವೋಚ್ಚ ನ್ಯಾಯಾಯದ ದಸ್ತಗಿರಿ ನಿಯಮಗಳನ್ನು ಪಾಲನೆ ಮಾಡಿ ದಸ್ತಗಿಹಿರಿ ಮಾಡಿದ್ದೇನೆ. ಸಿಬ್ಬಂದಿ ಮೂಲಕ ನ್ಯಾಯಾಲಯದ ಮುಂದೆ ಆರೋಪಿಯನ್ನು ಮಾಡಿದ್ದೇನೆ. ದಿಃ05/1/2017 ರಂದು ರಂಗಯ್ಯ, ಪೂರ್ಣೇಶ, ಕೃಷ್ಣರಾಜು, ಕುಮಾರ ಹಾಗೂ ಇತರರ ಹೇಳಿಕೆ ಪಡೆದಿದ್ದೇನೆ. ದಿಃ02/2/2017 ರಂದು ಆರೋಪಿ 2 ಸುರೇಶ ರವರು ಠಾಣೆಗೆ ಹಾಜರಾಗಿರುತ್ತಾರೆ ಮತ್ತು ಅವರ ಜೊತೆ ನಿರೀಕ್ಷಣಾ ಜಾಮೀನು ತಂದಿರುತ್ತಾರೆ. ಆ ಪ್ರಕಾರ ಅವರನ್ನು ಬಂಧಿಸಿ ಬಿಡುಗಡೆ ಮಾಡಿದ್ದೇನೆ. ಸದರಿ ಆರೋಪಿಯ ಸ್ವಇಚ್ಚಾ ಹೇಳಿಕೆ ಪಡೆದಿದ್ದೇನೆ. ರವಿರವರನ್ನೂ ಸಹ ಬಂಧಿಸಿ ಬಿಡುಗಡೆ ಮಾಡಿದ್ದೇನೆ. ಸದರಿ ಆರೋಪಿಯ ಸ್ವಇಚ್ಚಾ ಹೇಳಿಕೆ ಪಡೆದಿದ್ದೇನೆ. ಆ ನಂತರ ಆರೋಪಿ 4, 5 ರವರನ್ನೂ ಸಹ ಕಡೂರಿನಲ್ಲಿ ಸಿಬ್ಬಂದಿ ವಶಕ್ಕೆ ಪಡೆದು ನನ್ನ ಮುಂದೆ ಹಾಜರು ಮಾಡಿದ್ದಾರೆ. ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ನಂತರ ಅವರನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ. ಆರೋಪಿ ನಿಂಗಾನಾಯ್ಕ ನವರನ್ನು ನ್ಯಾಯಾಲಯದ ಆದೇಶದಂತೆ ಪೋಲೀಸ್ ವಶಕ್ಕೆ ಪಡೆದಿದ್ದೇನೆ.

ಸದರಿ ಆರೋಪಿ ತೋರಿಸಿದ ಹಾಗೆ ಆರೋಪಿ ನಾಗೇನಹಳ್ಳಿಯಲ್ಲಿ ಅವರ ಗುಡಿಸಲಿನಲ್ಲಿಟ್ಟಿದ್ದ ಕೋವಿಯನ್ನು ಪಂಚರ ಸಮಕ್ಷಮ ಸ್ವಾದೀನಪಡಿಕೊಂಡಿರುತ್ತೇನೆ. ಕೋವಿಯನ್ನು ಪಿ ಎಫ್ ಗೆ ಅಳವಡಿಸಿದ್ದೇನೆ.

ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಆರೋಪಿ ಎಂ ಸಿ ಹಳ್ಳಿಯ ಪಾರೆಸ್ಟ್ ಬಳಿ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಆರೋಪಿ ತೋರಿಸಿದ ಕೊಟ್ಟ ಹಾಗೆ ಸದರಿ ಸ್ಥಳದಲ್ಲಿ ಮಹಜರ್ ಮಾಡಿದ್ದೇನೆ. ಆರೋಪಿತರು ಆ ಸ್ಥಳದಲ್ಲಿ ಚಿರತೆಯನ್ನ ಕೊಂದು ಚರ್ಮ ತೆಗೆದಿರುತ್ತಾರೆ. ನಂತರ ಚಿರತೆ ಚರ್ಮವನ್ನು ಎಫ್ ಎಸ್ ಎಲ್ ವರದಿ ಪಡೆದುಕೊಳ್ಳಲು ಸಂಬಂದಪಟ್ಟ ಇಲಾಖಗೆ ಕಳುಹಿಸಿದ್ದೇನೆ. ಒಂಟಿ ನಳಿಕೆ ಬಂದೂಕನ್ನೂ ಸಹ ಎಫ್ ಎಸ್ ಎಲ್ ವರದಿ ಪಡೆದುಕೊಳ್ಳಲು ಸಂಬಂದಪಟ್ಟ ಇಲಾಖೆಗೆ ಕಳುಹಿಸಿದ್ದೇನೆ. ದಿಃ05/4/2017 ರಂದು ಪೂರ್ಣೇಶ, ಕೃಷ್ಣರಾಜು, ಕುಮಾರ ಮುಂತಾದವರ ಮುಂದುವರೆದ ಹೇಳಿಕೆ ಪಡೆದಿದ್ದೇನೆ. ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಪೋಲೀಸ್ ನಿರೀಕ್ಷಕರಾದ ಜಯಂತ್ ಗೌಳಿ ಯವರಿಗೆ ವರ್ಗಾಯಿಸಿದ್ದೇನೆ.

ಚಾಸಾ-1 ರವರು ನೀಡಿದ ದೂರು ನಿಪಿ 4 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ-4(ಬಿ) ಎಂದು, ಪ್ರ ವ ವನ್ನು ನೋಡುತ್ತಿದ್ದೇನೆ. ಅದನ್ನು ನಿಪಿ-9 ಎಂದು, ಸಹಿ ನಿಪಿ-9(ಎ) ಎಂದು ಗುರುತಿಸಲಾಯ್ತು. ನಿಪಿ-1 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ2 ಮತ್ತು 3 ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತೇನೆ. ಆರೋಪಿ ಸ್ಥಳ ತೋರಿಸಿದಂತೆ ಎಂ ಸಿ ಹಳ್ಳಿಯಲ್ಲಿ ಬರೆದ ಮಹಜರ್ ನಿಪಿ-7 ಆಗಿರುತ್ತದೆ. ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯ್ತು. ನಿಪಿ8 ಭಾವಚಿತ್ರದಲ್ಲಿ ನಾನು ಕಂಡು ಬರುತ್ತೇನೆ. ಚಿರತೆ ಚರ್ಮದ ಬಗ್ಗೆ ಎಫ್ ಎಸ್ ಎಲ್ ರವರಿಗೆ ಬರೆದ ಪತ್ರವನ್ನು ನಿಪಿ-10 ಎಂದು, ಸಹಿ ನಿಪಿ-10(ಎ) ಎಂದು ಗುರುತಿಸಲಾಯ್ತು. ಬಂದೂಕಿನ ಬಗ್ಗೆ ಎಫ್ ಎಸ್ ಎಲ್ ರವರಿಗೆ ಬರೆದ ಪತ್ರವನ್ನು ನಿಪಿ-11 ಎಂದು, ಸಹಿ ನಿಪಿ-11(ಎ) ಎಂದು ಗುರುತಿಸಲಾಯ್ತು. ನಾಡಬಂದೂಕನ್ನು ನೋಡುತ್ತಿದ್ದೇನೆ. ಅದನ್ನು ಮು ಮಾ2 ಎಂದು ಗುರುತಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಚಿರತೆ ಕೊಂದು ಚರ್ಮ ಮಾರಾಟ ಮಾಡಲು ಪ್ರಯತ್ನ ಮಾಡಿದ ಆರೋಪಿತರಾಗಿದ್ದಾರೆ, ಅವರನ್ನೇ ನಾನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದೇನೆ. ಚಿರತೆ ಚರ್ಮ ಈಗಾಗಲೇ ಮು ಮಾ1 ಆಗಿರುತ್ತದೆ. ನಿಪಿ 6 ರಲ್ಲಿ ಕತ್ತಿ, ಮೊಬೈಲ್ ಕಂಡು ಬರುತ್ತದೆ. ಅದರ ಜೊತೆ ಚಿರತೆ ಚರ್ಮ ಸಹ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಬಿ ಟಿ ಜಿ ವಕೀಲರಿಂದಃ**

ಚಾಸಾ-1 ರವರು ನಾನು ಹೇಳಿದಂತೆ ಯಾವುದೇ ವಸ್ತು, 1 ನೇ ಆರೋಪಿಯನ್ನು ನನ್ನ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾದ ಎಸಗದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾಡಬಂದೂಕನ್ನು ಪಂಚರ

ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ಥಳವನ್ನು ನಮಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಅವುಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೇಪಿತರಿಗೂ ಮುದ್ದೆಮಾಲುಗಳಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 6 ನೇ ಆರೋಪಿತರ ಪರ ಕೆ ಪಿ ವಕೀಲರಿಂದಃ</u>**

ಆರೋಪಿ 6 ರವರ ಮೇಲೂ ಯಾವುದೇ ಅಪರಾದ ಕಂಡು ಬಂದರೇ ಇದ್ದರೂ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**(ಎಂ.ಸಿ. ನಂಜೇಗೌಡ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.